ಕರ್ನಾಟಕ ವಿಧಾನಸಭೆ

ಸೋಮವಾರ 19ನೇ ಫೆಬ್ರವರಿ 2007 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 11.14 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀ: ಎನ್.ವೈ. ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಧರಣಿ

ವಿಷಯ: ಮೇಲ್ಮನೆ ಸಭಾಪತಿ ಚುನಾವಣೆ ನಡೆಸುವ ಬಗ್ಗೆ ಧರಣಿ.

(ಸದನವು 11 ಗಂಟೆ 14 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಕಾವೇರಿ ನದಿ ನೀರಿನ ತೀರ್ಪಿನ ಬಗ್ಗೆ ಸರ್ಕಾರದ ನಿಲುವನ್ನು ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಕಾವೇರಿ ಚಿಂತನೆಯ ಬಗ್ಗೆ ಹೇಳುತ್ತಿಲ್ಲವಲ್ಲಾ? ನಾನು ಒಂದೇ ಸಮನೆ ಕೇಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರದ ನಿರ್ಧಾರವೇನು? ಕಾವೇರಿಯ ಬಗ್ಗೆ ತೀರ್ಪು 5ನೇ ತಾರೀಖು ಬಂತು, ಇವತ್ತು 19ನೇ ತಾರೀಖು ಕಳೆದರೂ ಕಾವೇರಿಯ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು? ಸರ್ಕಾರದವರು ಏನು ಮಾಡುತ್ತಿದ್ದಾರೆ? ಪ್ರತಿ ಸಾರಿಯು ಸರ್ವಪಕ್ಷಗಳ ನಿಯೋಗವೆಂದು ಹೇಳಿ ಅದನ್ನು 24ನೇ ತಾರೀಖು ಮುಂದಕ್ಕೆ ಹಾಕಿದ್ದೇವೆಂದು ಹೇಳುತ್ತಾರೆ. ಈ ಸದನ ಇರುವುದು ಏತಕ್ಕೆ? ಈ ಸದನದ ಪ್ರಾಮುಖ್ಯತೆ ಏನು? ಈ ಸದನವನ್ನು ಇಡೀ ರಾಜ್ಯದ ಜನರು ಸಮಗ್ರವಾಗಿ ನೋಡುತ್ತಿದ್ದಾರೆ. ಈ ಸದನವನ್ನು ಇಡೀ ರಾಜ್ಯದ ಜನಪ್ರತಿನಿಧಿಗಳು ಕಾವೇರಿಯ ಬಗ್ಗೆ ಏನು ಮಾಡುತ್ತಿದ್ದಾರೆ? ಕಾವೇರಿಯ ಪ್ರಶ್ನೆಯನ್ನು ಏನು ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರದ ನಿಲುವು ಏನು? ಸರ್ಕಾರ ಇದುವರೆವಿಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಿರುವುದಿಲ್ಲ. ತಮ್ಮ ನಿಲುವನ್ನು ಹೇಳಿಲ್ಲ, ಏನು ನಿರ್ಧಾರವೆಂದು ಮಾಡಿಲ್ಲ. ಇದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆಂದು ನಮಗೆ ಅತ್ಯಂತ ಅನುಮಾನವಾಗಿದೆ. ಇಡೀ ರಾಜ್ಯದ ಜನರು ಒಂದು ಕಡೆ ನಿಂತಿದ್ದಾರೆ, ಕಾವೇರಿಗೆ ಅನ್ಯಾಯವಾಗಿದೆ

ಎಂದು ಹೇಳಿ ಇಡೀ ರಾಜ್ಯದ ಉದ್ದಗಲಕ್ಕೂ ಜನರು ನಿಂತಿದ್ದಾರೆ. ಸರ್ಕಾರ ಈ ಬಗ್ಗೆ ಮೌನವಾಗಿರುವುದಕ್ಕೆ ಕಾರಣವೇನು? ಇದರ ಬಗ್ಗೆ ಸರ್ಕಾರದ ನಿರ್ಧಾರವೇನು? ಸರ್ಕಾರ ಈ ಬಗ್ಗೆ ತಮ್ಮ ನಿರ್ಧಾರವನ್ನು ಪ್ರಕಟಿಸಬೇಕು. ಇದು ಸರಿಯಾದ ಕ್ರಮವಲ್ಲ. ಸರ್ಕಾರ ಈ ರೀತಿಯಾಗಿ ಗಂಭೀರವಾಗಿರುವುದು ಸರಿಯಲ್ಲ. ಸರ್ಕಾರ ಇದೆಯೇ ಅಥವಾ ಸರ್ಕಾರ ಇಲ್ಲವೇ ಇದರ ಬಗ್ಗೆ ತೀರ್ಮಾನವಾಗಬೇಕು. ಸರ್ಕಾರ ಇದೆ ಎನ್ನುವುದಾದರೆ, ಅವರು ಕಾವೇರಿಯ ಬಗ್ಗೆ ನಮ್ಮ ಸರ್ಕಾರದ ನಿಲುವು ಇದು, ನಮ್ಮ ಸರ್ಕಾರದ ನಿಲುವು ಸ್ಪಷ್ಟವಾಗಿದೆ ಎಂದು ಹೇಳಬೇಕು. ಆಗ ಸರ್ಕಾರದ ನಿಲುವು ಏನೆಂದು ಇದುವರೆವಿಗೂ ಕೇಳಿಲ್ಲ. ಈ ಸದನದಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳು ಇದ್ದಾರೆ, 5ನೇ ತಾರೀಖು ಕಾವೇರಿಯ ಬಗ್ಗೆ ತೀರ್ಪು ಬಂತು. ಎಲ್ಲಿಟ್ಟಿದ್ದೀರಿ ತೀರ್ಪು? ಅದರ ಬಗ್ಗೆ ಏನು ಮಾಡಿದ್ದೀರಿ, ಈ ಸರ್ಕಾರದಲ್ಲಿ ನಿಮ್ಮ ನೀತಿಯೇನು? ನಿಮ್ಮ ನಿಲುವು ಏನೆಂದು ಸ್ಪಷ್ಟಪಡಿಸಬೇಕು. ವಿರೋಧಪಕ್ಷದವರು ಹೇಳುವಂತಹದ್ದು, ಸರ್ವಪಕ್ಷಗಳ ಬಗ್ಗೆ ಆಮೇಲೆ ಹೇಳಿ. ಇದರ ಬಗ್ಗೆ ನಿಮ್ಮ ನಿಲುವು ಏನು? ಸ್ಪಷ್ಟವಾಗಿ ನೇರವಾಗಿ ನಾವು ಈ ರೀತಿಯಾಗಿ ಇದ್ದೇವೆಂದು ನಿಲುವು ಇದೆ ಎಂದು ತಾವು ಹೇಳಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ.

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಸರ್ಕಾರದ ವಿರುದ್ಧ ಧಿಕ್ಕಾರ ಘೋಷಣೆಯನ್ನು ಕೂಗುತ್ತಿದ್ದರು)

ಶ್ರೀ ಬಿ.ಎಸ್.ಯಡಿಯೂರಪ್ಪ(ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಾನು ಪ್ರತಿಪಕ್ಷದ ನಾಯಕರಲ್ಲಿ ಒಂದು ವಿನಂತಿಯನ್ನು ಮಾಡುತ್ತೇನೆ. ಕಳೆದ ಒಂದು ವರ್ಷದಲ್ಲಿ ಒಂದಲ್ಲ ಒಂದು ಕಾರಣಕ್ಕೆ .....

ಉಪಾಧ್ಯಕ್ಷರು: ಮಾನ್ಯ ಉಪಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ.

ಶ್ರೀ ವಾಟಾಳ್ ನಾಗರಾಜ್: ನೀವು ಒಂದೇ ಲೈನ್‌ನಲ್ಲಿ ನಿಮ್ಮ ಸರ್ಕಾರದ ನಿರ್ಧಾರವನ್ನು ಹೇಳಿ, ಇಲ್ಲಾ ತಿರಸ್ಕರಿಸಿದ್ದೇವೆಂದಾದರೂ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ವಾಟಾಳ್ ನಾಗರಾಜ್‌ರವರೆ ಒಂದು ನಿಮಿಷ ತಾಳಿ ಹೇಳುತ್ತೇನೆ. ಕಾವೇರಿ ವಿಷಯದಲ್ಲಿ ತೀರ್ಪು ಬರುವುದಕ್ಕೆ ಮುಂಚೆ ಪ್ರತಿಪಕ್ಷದ ನಾಯಕರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿದ್ದೇವೆ. ತೀರ್ಪು ಬಂದ ನಂತರ ಪ್ರತಿಪಕ್ಷದ ನಾಯಕರ ಹಾಗೂ

ಹಿರಿಯರ ಜೊತೆ ಸಮಾಲೋಚನೆಯನ್ನು ಮಾಡಿದಾಗ ತಾವೇ ಕೊಟ್ಟಂತಹ ಸಲಹೆ, ಆ ತೀರ್ಪಿನ ಪ್ರತಿಯನ್ನು ನಮ್ಮೆಲ್ಲರಿಗೂ ಒದಗಿಸಿಕೊಡಿ, ನಂತರ ಇನ್ನೊಂದು ಸಭೆಯನ್ನು ಕರೆಯಿರಿ ಎಂದು ಹೇಳಿದ್ದೀರಿ. ನಾನು ಇವತ್ತು ತಮಗೆ ಸಲಹೆಯನ್ನು ಕೊಡುವಂತಹದ್ದು, ತಾವು ಸರ್ಕಾರದ ನಿಲುವು ಏನೆಂದು ಕೇಳಿದ್ದೀರಿ, ಕಾವೇರಿಯ ವಿಚಾರದಲ್ಲಿ Tribunal ಕೊಟ್ಟಂತಹ ತೀರ್ಪು ಕನ್ನಡನಾಡಿನ ಜನರಿಗೆ ಇದೊಂದು ಮರಣಶಾಸನವಾಗಿದೆ. ಆ ಭಾಗದಲ್ಲಿರುವಂತಹ ರೈತರಿಗೆ ಅನ್ಯಾಯವಾಗಿದೆ, ಇದರ ಬಗ್ಗೆ ಪಕ್ಷಬೇಧವನ್ನು ಮರೆತು ಈ ಮನೆಯ ಒಳಗಡೆ ಮತ್ತು ಹೊರಗಡೆ ಇಡೀ ನಾಡಿನ ಜನರು ಒಂದಾಗಿ ಇವತ್ತಿನದಿವಸ ಶಾಂತರೀತಿಯಲ್ಲಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರದ ಪರವಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವತ್ತು ಅಥವಾ ನಾಳೆ ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ನಿಮ್ಮ ಪ್ರತಿಪಕ್ಷದ ನಾಯಕರ ಜೊತೆ ಸಮಾಲೋಚನೆಯನ್ನು ಮಾಡಿ, ಲೋಕಸಭಾ ಸದಸ್ಯರ ಜೊತೆ ಸಮಾಲೋಚನೆಯನ್ನು ಮಾಡುತ್ತಿದ್ದೇವೆ. Parliament ಒಳಗಡೆಯು ಸಹ ನಮಗೆ ಅನ್ಯಾಯವಾಗಿದೆ ಎನ್ನುವುದನ್ನು ಕರ್ನಾಟಕವನ್ನು ಪ್ರತಿನಿಧಿಸುವಂತಹ ಎಲ್ಲಾ ಸಂಸತ್ ಸದಸ್ಯರು ಅಲ್ಲಿ ಹೋರಾಟವನ್ನು ಮಾಡಬೇಕೆಂದು ಹೇಳಿದ್ದೇವೆ. ಈಗಿರುವಂತಹ ಪ್ರಕಾರ Supreme Court ಮುಂದೆಯೂ ಹೋಗುವುದಕ್ಕೆ ಅವಕಾಶವಿದೆ. Tribunal ಮುಂದೆಯೂ ಸಹ ನಮಗೆ ಅನ್ಯಾಯವಾಗಿದೆ ಎಂದು ಹೇಳಿ ಪರಿಶೀಲನೆ ಮಾಡುವಂತಹ ಅವಕಾಶವಿದೆ. ಪ್ರತಿಪಕ್ಷದ ನಾಯಕರು ಸಭೆಯಲ್ಲಿ ತಾವು ಏನು ಸಲಹೆಯನ್ನು ಕೊಡುತ್ತೀರಿ, ಆ ಸಲಹೆಗೆ ನಾವು ಬದ್ದರಾಗಿದ್ದೇವೆ, ಅದರಂತೆ ನಾವು ನಡೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಸದನದಲ್ಲಿ ನಿರ್ಣಯವನ್ನು ಮಂಡಿಸಬೇಕು, ಅದರ ಮೇಲೆ ಚರ್ಚೆಯಾಗಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಒಂದು ನಿಮಿಷ ತಾಳಿ, ನಿಮ್ಮ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ. ನಾನು ಪ್ರತಿಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಿಮ್ಮದು ಏನೇ ಸಮಸ್ಯೆಗಳು ಇದ್ದರೆ ಬಿಚ್ಚುಮನಸ್ಸಿನಿಂದ ನಾವು ನಿಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡುವುದಕ್ಕೆ ಸಿದ್ದರಿದ್ದೇವೆ. ದಯಮಾಡಿ ತಾವುಗಳೆಲ್ಲರೂ ಸೀಟಿಗೆ ಬಂದರೆ ಕಳೆದ ಒಂದು ವರ್ಷದಿಂದ ಸಮ್ಮಿಶ್ರಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಒಂದಲ್ಲ ಒಂದು ಕಾರಣಕ್ಕೆ ಧರಣಿ, ಸತ್ಯಾಗ್ರಹ, ಚಳುವಳಿ ಇದು ಆಗಿದೆಯೇ ಹೊರತು ಇವತ್ತು

ರಾಜ್ಯಪಾಲರ ಭಾಷಣದ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಬೇಕಾಗಿದೆ. ಇಂತಹ ಸಮಯದಲ್ಲಿ ನಾವು ಸಮಯವನ್ನು ವ್ಯರ್ಥಮಾಡದೆ ಅದರ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡದೆ ಇದ್ದರೆ ನಾವು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಲ್ಲೋ ಒಂದು ಕಡೆ ನಾವು ಲೋಪವನ್ನು ಮಾಡುತ್ತಿದ್ದೇವೆಂಬ ಭಾವನೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್: ಕಾವೇರಿಯ ಬಗ್ಗೆ 5ನೇ ತಾರೀಖು ತೀರ್ಮ ಬಂತು, ಇವತ್ತು 19ನೇ ತಾರೀಖು ಆದರೂ.....

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಪ್ರತಿಪಕ್ಷದ ನಾಯಕರಲ್ಲಿ ವಿನಂತಿಯನ್ನು ಮಾಡುತ್ತೇನೆ. ನೀವೆಲ್ಲರೂ ಬನ್ನಿ. ನಿಮ್ಮದು ಏನೇ ಸಮಸ್ಯೆಗಳು ಇದ್ದರೆ ಅದನ್ನು ಬಿಚ್ಚುಮನಸ್ಸಿನಿಂದ ಸರ್ಕಾರ ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಸಿದ್ದವಿದೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಕಾವೇರಿಯ ವಿಷಯದ ಬಗ್ಗೆ ಮಾತನಾಡುತ್ತಾ ಸಭೆಯಿಂದ ಹೊರನಡೆದರು)

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಉತ್ತರವನ್ನು ಕೊಟ್ಟರೂ ಸಹ ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಚಾರಕೋಸ್ಕರ ಈ ರೀತಿಯಾಗಿ ಮಾಡುತ್ತಿದ್ದಾರೆ. ಅವರು ಪ್ರತಿನಿತ್ಯ ಹೀಗೆ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು: ಈಗ ಆಯಿತು, ಈಗ ಅವರು ಹೊರಗಡೆ ಹೋಗಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ: ಸರ್ಕಾರದ ಪರವಾಗಿ ಪ್ರಾಮಾಣಿಕವಾದ ಉತ್ತರವನ್ನು ಕೇಳುವುದಕ್ಕೆ ತಯಾರು ಇಲ್ಲವೆಂದರೆ ಹೇಗೆ? ಈ ರೀತಿಯ ಪ್ರತಿಭಟನೆಯಿಂದ ಏನು ಆಗುವುದಿಲ್ಲ. ಈ ರೀತಿಯಾದರೆ ರಾಜ್ಯದ ಜನರಿಗೆ ನ್ಯಾಯ ದೊರಕುವುದಿಲ್ಲ. ಈ ಬಗ್ಗೆ ಪ್ರಾಮಾಣಿಕವಾಗಿ ಸಮಾಲೋಚನೆಯನ್ನು ಮಾಡಬಹುದು. ಇಲ್ಲಿ ಚರ್ಚೆಯನ್ನು ಮಾಡಬಹುದು. ಸರ್ಕಾರದ ಪರವಾಗಿ ಉತ್ತರವನ್ನು ಕೊಟ್ಟರೂ ಸಹ ಶಾಂತಿಯುತವಾಗಿ ಕುಳಿತುಕೊಂಡು ಚರ್ಚೆಯಲ್ಲಿ ಭಾಗವಹಿಸಬಹುದು.

ಉಪಾಧ್ಯಕ್ಷರು: ಮಾನ್ಯ ಜ್ಞಾನೇಂದ್ರರವರೆ, ಒಂದು ನಿಮಿಷ ತಾಳಿ Opposition Leader ಏನು ಹೇಳುತ್ತಾರೆಂದು ಕೇಳೋಣ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಪ್ರತಿನಿತ್ಯ ಈ ಸದನದಲ್ಲಿ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಚರ್ಚೆ ನಡೆಯುತ್ತಿದೆ, ಆದರೆ ಈ ರೀತಿ

ಪ್ರತಿಭಟನೆಗಳಿಂದ ಜನಗಳಿಗೆ ಒಳ್ಳೆಯದಾಗುವುದಿಲ್ಲ. ಕರ್ನಾಟಕ ರಾಜ್ಯದ ಅಸೆಂಬ್ಲಿ ಈ ರೀತಿ ನಡೆಯುವುದರಿಂದ ನಮಗೆ ಶ್ರೇಯಸ್ಸು ತರುವುದಿಲ್ಲ.

ಉಪಾಧ್ಯಕ್ಷರು: ಮಾನ್ಯ ಜ್ಞಾನೇಂದ್ರರವರೇ ಒಂದು ನಿಮಿಷ. ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ಧರಂಸಿಂಗ್ (ವಿರೋಧಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಕಾವೇರಿ ತೀರ್ಪಿನ ಬಗ್ಗೆ ನಮಗೆ ಭಿನ್ನಾಭಿಪ್ರಾಯ ಇಲ್ಲ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಕರೆದಂತಹ ಎರಡು ಸಭೆಯಲ್ಲಿ ನಾವೆಲ್ಲರೂ ಕೂಡ ಪಾಲ್ಗೊಂಡಿದ್ದೇವೆ. ಸರ್ಕಾರದವರು ಅಂತಿಮವಾಗಿ ನೀರಾವರಿ ತಜ್ಞರು, ಕಾನೂನಿನ ತಜ್ಞರು ಎಲ್ಲರನ್ನು ಸಂಪರ್ಕಿಸಿ ಮತ್ತೊಂದು ಸಭೆಯನ್ನು ಕರೆಯುವುದಾಗಿ ಹೇಳಿದ್ದಾರೆ. ಜಡ್ಜ್‌ಮೆಂಟ್ ಕಾಪಿ ಕೂಡ ನಮಗೆ ಬಂದಿದೆ. ಇವತ್ತಿನ ಪತ್ರಿಕೆಯ ಮೂಲಕ ಬಂದಿದ್ದು, 22ನೇ ತಾರೀಖು ಸಂಸದರ ಸಭೆ, 24ನೇ ತಾರೀಖು ಸರ್ವಪಕ್ಷಗಳ ನಾಯಕರ ಸಭೆ ಕರೆಯಲಾಗುವುದು ಎಂದು ಬಂದಿದೆ. ಇನ್ನೂ ಆ ಬಗ್ಗೆ ಯಾವ ಪತ್ರ ಕೂಡ ಬಂದಿಲ್ಲ. ಒಂದು ಮಾತ್ರ ಹೇಳುತ್ತಿದ್ದೇವೆ. ಇಷ್ಟು ಧರಣಿ ಮಾಡಿ ಎಲ್ಲಾ ಪಕ್ಷದ ಜನರು ಪಕ್ಷಭೇದ ಮರೆತು ಇವತ್ತು ಮೊಟ್ಟಮೊದಲನೆಯದಾಗಿ ಕಾವೇರಿ ತೀರ್ಪಿನ ಬಗ್ಗೆ ರಾಜ್ಯಕ್ಕೆ ಅನ್ಯಾಯವಾಗಿದೆಯೆಂಬ ಮಾತನ್ನು ನಾವು ಹೇಳಿದ್ದೇವೆ. ಮಾನ್ಯ ಯಡಿಯೂರಪ್ಪನವರು ಇವತ್ತು ಹೇಳುತ್ತಿದ್ದಾರೆ. ಇಲ್ಲಿಯವರೆಗೆ ಸರ್ಕಾರದ ಏನು ಧೋರಣೆ ಇದೆ, ಸರ್ಕಾರ ಯಾವರೀತಿಯಾಗಿ ಇವತ್ತು ಹೋಗಬೇಕಾಗಿದೆ ಎನ್ನುವುದನ್ನು ಕೂಡ ಮಾತನಾಡಿಲ್ಲ. ಅದು ಕೂಡ ಬಹಳಷ್ಟು ರೀತಿ ರಾಜಕೀಯವಾಗಿ ಸಂಚು ಇವತ್ತಿನ ದಿವಸ ಎಲ್ಲೋ ಒಂದು ಕಡೆ ಕೂಡಿ ಯಾರ ಮೇಲೊ ಗೂಬೆ ಕೂರಿಸುವಂಥ ಕೆಲಸ ಮಾಡುತ್ತಿದ್ದಾರೆ. ನಮಗೆ ಅದರ ಬಗ್ಗೆ ತಕರಾರು ಇಲ್ಲ. ಸರ್ವಪಕ್ಷದ ಸಭೆಯಲ್ಲಿ ನಮ್ಮ ಪಕ್ಷದ ಏನು ಒಂದು ನಿರ್ಧಾರ ಇದೆ, ಏನು ನಿಲುವು ಇದೆ ಎನ್ನುವ ಮಾತನ್ನು ಹೇಳುತ್ತೇವೆ. ಎರಡನೆಯದಾಗಿ ಇವತ್ತಿನ ದಿವಸ ಹೇಳುವುದಾದರೆ, ಮೊನ್ನೆ ತಾವು ಇದ್ದಿರಿ, ಮುಖ್ಯಮಂತ್ರಿಗಳೂ ಇದ್ದರು, ಗೃಹ ಸಚಿವರು ಇದ್ದರು. ಮತ್ತೆ ಸೋಮವಾರದಂದು ಬೆಳಿಗ್ಗೆ 10.00 ಗಂಟೆಗೆ ನಮ್ಮನ್ನು ಕರೆಸುವುದಾಗಿ ಹೇಳಿದರು, ಆದರೆ ನಾವು ಏತಕ್ಕೆ ಮೊಟ್ಟ ಮೊದಲನೆಯದಾಗಿ ಇವತ್ತು ಪ್ರತಿಭಟನೆ ಮಾಡುತ್ತಿದ್ದೇವೆಂದರೆ ವಿಧಾನ ಪರಿಷತ್ತಿನ ನಮ್ಮ ಎಲ್ಲಾ ಸದಸ್ಯರನ್ನು ಅಮಾನತ್ತುಗೊಳಿಸಿ, ಬಹುಮತ ಇದ್ದಂಥ ಸದಸ್ಯರನ್ನು ಅಮಾನತ್ತುಗೊಳಿಸಿ ನೀವು ತಿಪ್ಪಣ್ಣನವರಿಗೆ ಆ ಸ್ಥಾನದಲ್ಲಿ ಕೂರಿಸತಕ್ಕಂಥ ಹಕ್ಕಿಲ್ಲವೆಂದು

ಪ್ರತಿಪಾದನೆಯನ್ನು ಮಾಡಿದ್ದೇವೆ. ಎಲ್ಲ ಸದಸ್ಯರನ್ನು ಅಮಾನತ್ತುಗೊಳಿಸಿದ್ದಾರೆ, ಅದಕ್ಕೋಸ್ಕರ ಮೊಟ್ಟ ಮೊದಲನೆಯದಾಗಿ ಪ್ರತಿಭಟನೆ ಮಾಡಲೇಬೇಕಲ್ಲವೇ? ವಿಧಾನಪರಿಷತ್ತಿನ ಸದಸ್ಯರನ್ನು ಅಮಾನತ್ತುಗೊಳಿಸಿರುವುದು ಇದು ಮೊದಲನೇ ಪ್ರಕರಣ. ಇವತ್ತು ಮಾನ್ಯ ಮುಖ್ಯಮಂತ್ರಿಗಳೂ ನಮ್ಮನ್ನು 10.00 ಗಂಟೆಗೆ ಕರೆಸುವುದಾಗಿ ಆಶ್ವಾಸನೆಯನ್ನು ಕೊಟ್ಟರೂ ಸಹ ಇದುವರೆಗೂ ನಮ್ಮನ್ನು ಕರೆಸಿಲ್ಲ. ಅದಕ್ಕಾಗಿ ನಾವು ಪ್ರತಿಭಟನೆಯನ್ನು ಮುಂದುವರೆಸುತ್ತಿದ್ದೇವೆ, ಎಲ್ಲಿಯವರೆಗೆ ವಿಧಾನಪರಿಷತ್ತಿನ ಸಮಸ್ಯೆಯನ್ನು ಬಗೆಹರಿಸುವುದಿಲ್ಲ. ಇವತ್ತು ಆ ಮನೆಯಲ್ಲಿರತಕ್ಕಂಥ ಬಿಲ್ಲಿನ ವಿಷಯದಲ್ಲಿಯೂ ಕೂಡ ನಾವು ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಸಾಧ್ಯವಿಲ್ಲ. ಬಹಳಷ್ಟು ವಿಷಯಗಳು ಕೂಡ ಇದೆ. ಆ ಸದನದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆ ಕಾರಣದಿಂದಾಗಿ ನಮ್ಮ ಪ್ರತಿಭಟನೆಯನ್ನು ಮುಂದುವರೆಸುತ್ತೇವೆ.

ಉಪಾಧ್ಯಕ್ಷರು: ಈಗ ಸದನವನ್ನು ಅರ್ಧಗಂಟೆ ಕಾಲ ಮುಂದೂಡಲಾಗಿದೆ.

(ಸದನವನ್ನು ಬೆಳಿಗ್ಗೆ 11.23 ಗಂಟೆಗೆ ಮುಂದೂಡಿ ಪುನಃ ಅರ್ಧ ಗಂಟೆಯ ನಂತರ ಸೇರುವುದಾಗಿ ನಿರ್ಣಯಿಸಿತು)

(ಸದನವು ಮತ್ತೆ 1 ಗಂಟೆ 31 ನಿಮಿಷಕ್ಕೆ ಪ್ರಾರಂಭವಾಯಿತು. ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ನಿಂತು ಧರಣಿ ಮಾಡುತ್ತಿದ್ದರು)

ಉಪಾಧ್ಯಕ್ಷರು: ತಾವು ಏನು ಕೇಳುತ್ತೀರೋ ಅದನ್ನು ನಾನು ಹೇಳುವುದಕ್ಕಿಂತ ಮೊದಲು ಕೇಳಿಬಿಡಿ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರಕ್ಕೆ ಧಿಕ್ಕಾರ ಎಂದು ಘೋಷಣೆಯನ್ನು ಕೂಗುತ್ತಿದ್ದರು)

ಉಪಾಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 3.30ಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನ 1 ಗಂಟೆ 32 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಸಾಯಂಕಾಲ 4.06 ಗಂಟೆಗೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಡೆಸುತ್ತಿದ್ದರು)

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಮಾತನಾಡುವುದಕ್ಕಾದರೂ ಬಿಡಿ ಸಾರ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಮಗೆ ಮಾತನಾಡಲಾದರೂ ಅವಕಾಶ ಕೊಡಿ. ನೀವು ಹೀಗೆ ಎದ್ದು ಹೊರಟುಬಿಟ್ಟರೆ ನಾವೇನು ಮಾಡುವುದು? (ಗೊಂದಲ) 1ನೇ ತಾರೀಖಿನಿಂದ ಸದನ ನಡೆಯುತ್ತಿಲ್ಲ. (ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಕಾವೇರಿ ವಿಷಯದ ಬಗ್ಗೆ ಏನಾಯಿತು?

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ದಯವಿಟ್ಟು ಕಲಾಪ ನಡೆಸಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಮಾತೆತ್ತಿದರೆ ಸದನವನ್ನು ಮುಂದಕ್ಕೆ ಹಾಕಿ ಎದ್ದು ಹೋಗಿಬಿಟ್ಟರೆ ನಾವೇನು ಮಾಡಬೇಕು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಕಾವೇರಿ ವಿಷಯದ ಬಗ್ಗೆ . . . . .

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಕಾಂಗ್ರೆಸ್ ಪಕ್ಷದ ಸದಸ್ಯರು ಧಿಕ್ಕಾರ ಕೂಗುತ್ತಿದ್ದರು)

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸದನ ನಡೆಸಬೇಕು.

(ಗೊಂದಲ)

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನದಿಂದ ಹೊರ ನಡೆಯುತ್ತಾ ಮಾತನಾಡುತ್ತಿದ್ದರು)

(ಈ ಹಂತದಲ್ಲಿ ವಾಟಾಳ್ ಪಕ್ಷದ ಶ್ರೀ ವಾಟಾಳ್ ನಾಗರಾಜ್‌ರವರು ಸದನದಿಂದ ನಿರ್ಗಮಿಸಿದರು)

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: (ಗೊಂದಲ) . . . . ಪ್ರತಿ ನಿತ್ಯ ಹೀಗಾದರೆ ಏನರ್ಥವಿದು?

(ಗೊಂದಲ) ಮಾನ್ಯ ಉಪಾಧ್ಯಕ್ಷರೆ, ಕಲಾಪ ನಡೆಸಿ. ಕಲಾಪ ನಡೆಸಬೇಕು. (ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಮಗೇನೂ ಬೇರೆ ಕೆಲಸವಿಲ್ಲವೇ? (ಗೊಂದಲ) ಸದನ ನಡೆಸಬೇಕೆಂದು ಸರ್ಕಾರಕ್ಕೆ ಹೇಳಿ.

(ಗೊಂದಲ)

ಉಪಾಧ್ಯಕ್ಷರು: ಒಂದು ನಿಮಿಷ, slogans ಹಾಕಿ ನೀವು, ಆದರೆ, ಮಾನ್ಯ ಮಾಧುಸ್ವಾಮಿ ಮತ್ತು ಶ್ರೀರಾಮರೆಡ್ಡಿಯವರು ಏನು ಹೇಳುತ್ತಿದ್ದಾರೆನ್ನುವುದನ್ನು ಕೇಳಿ.

(ಗೊಂದಲ)

(ಆ) ವಿಷಯ: ಸದನ ಮುಂದೂಡದೆ ಕಾರ್ಯಕಲಾಪ ನಡೆಸುವ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸದನ ನಡೆಸಬೇಕೆಂದು ಸರ್ಕಾರಕ್ಕೆ ಹೇಳಿ. (ಗೊಂದಲ) ಪ್ರತಿ ದಿನ ಸದನವನ್ನು ಮುಂದೂಡಿಕೊಂಡು ಹೋದರೆ ಆಗುವುದಿಲ್ಲ. ಸದನ ನಡೆಸಬೇಕೆಂದು ಸರ್ಕಾರಕ್ಕೆ ಹೇಳಿ.

ಶ್ರೀ ಎಂ.ಪಿ. ವೆಂಕಟೇಶ್: 4–5 ದಿವಸಗಳಿಂದ ಇದೇ ಕೆಲಸ.... (ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈ ರೀತಿ ಸದನವನ್ನು ಮುಂದುವರಿಸಿಕೊಂಡು ಹೋಗಲಿಕ್ಕೆ..... ಮಾತೆತ್ತಿದರೆ ಸದನವನ್ನು ಮುಂದೂಡಿಬಿಟ್ಟು ಹೊರಟುಹೋದರೆ ಆಗುವುದಿಲ್ಲ. ಸದನ ನಡೆಸಬೇಕೆಂದು ನಾವೂ ಕೂಡ ಧರಣಿ ಕೂರಬೇಕಾಗುತ್ತದೆ. ಉಪಾಧ್ಯಕ್ಷರೆ, ನೀವು ಸರ್ಕಾರದವರಿಗೆ ಹೇಳಬೇಕು. 1ನೇ ತಾರೀಖಿನಿಂದ ಸದನ ನಡೆಯಲಿಲ್ಲ. ರಾಜ್ಯದಲ್ಲಿ ಹಲವಾರು ಸಮಸ್ಯೆಗಳಿವೆ. ಕಾನೂನು ಸುವ್ಯವಸ್ಥೆ ಪ್ರಶ್ನೆ ಇದೆ. ಬರಗಾಲದ ಪ್ರಶ್ನೆ ಇದೆ. ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಕೋಮು ಗಲಭೆಗಳಾಗಿ ಜನರು ಸತ್ತಿದ್ದಾರೆ. ಇಂಥ ವಿಚಾರಗಳನ್ನೆಲ್ಲ ಚರ್ಚೆ ಮಾಡಬೇಕಾಗಿದೆ. ಸರ್ಕಾರದ ಮೇಲೆ ಒತ್ತಾಯ ಹಾಕಿ ಸದನವನ್ನು ನಡೆಸಬೇಕು. ಇಲ್ಲದಿದ್ದರೆ, ಸದನ ನಡೆಸಬೇಕೆಂದು ನಾವೂ ಧರಣಿ ಮಾಡುತ್ತೇವೆ. (ಗೊಂದಲ) ಸದನವನ್ನು ಸರ್ಕಾರ ಮುಂದೆ ಹಾಕಿಕೊಂಡು ಹೋಗುವುದೇ?

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ಇವರನ್ನು ಹೊರಗೆ ಹಾಕಬೇಕು.